


# ಹಂದಿ ಹಬ್ಬ!

ಬೇರೆ ಬೇರೆ ದೇಶಗಳಲ್ಲಿ ವಿವಿಧ ಆಚರಣೆ ಮತ್ತು ಸಂಪ್ರದಾಯಗಳನ್ನು ನಾವು ಕಾಣುತ್ತೇವೆ. ಒಂದು ದೇಶಕ್ಕಿಂತ ಇನ್ನೊಂದು ದೇಶ ವಿಭಿನ್ನವಾಗಿರುತ್ತದೆ.

ಫಿಲಿಪ್ಪೀನ್ಸ್ ದೇಶದ ರಾಷ್ಟ್ರೀಯ ಆಹಾರ ಹಂದಿ. ಜಗತ್ತಿನ ಯಾವ ದೇಶದಲ್ಲೂ ಕಾಣಿಸದಷ್ಟು ಸಂಖ್ಯೆಯ ಹಂದಿಗಳನ್ನು ಇಲ್ಲಿ ಸಾಕುತ್ತಿದ್ದಾರೆ. ವರ್ಷಕ್ಕೊಮ್ಮೆ ಹಂದಿಗಳ ಮೆರವಣಿಗೆ ಹಬ್ಬ ಇಲ್ಲಿನ ಬುಲಾಕಾನ್ ಪ್ರಾಂತ್ಯದ ಮಾಲೊಲೋಸ್ ಎಂಬಲ್ಲಿ ನಡೆಯುತ್ತದೆ. ಹಬ್ಬದ ಹಿಂದಿನ ದಿವಸ ಇಮ್ಯಾಕ್ಯುಲೇಟ್ ಚರ್ಚ್ ಸಭಾಂಗಣದಲ್ಲಿ ಹಂದಿಗಳ ಉತ್ಸವ ಜರಗುತ್ತದೆ.

ಹೆಣ್ಣು ಹಂದಿಯ ತುಟಿಗೆ ಲಿಪ್‌ಸ್ಟಿಕ್ ಹಚ್ಚಿ ಶೃಂಗಾರ ಪ್ರಸಾದನಗಳಿಂದ ಮೇಕಪ್ ಮಾಡುತ್ತಾರೆ. ವಸ್ತ್ರಾಭರಣಗಳಿಂದ ಅಲಂಕರಿಸಿ ಮುತ್ತಿನ ಕಿರೀಟವಿಟ್ಟು ರಾಣಿಯನ್ನಾಗಿ ಮಾಡುತ್ತಾರೆ. ಕಟ್ಟುಮಸ್ತಾದ ದೇಹದ ಗಂಡು ಹಂದಿ ಪೋಷಾಕುಗಳನ್ನು ಧರಿಸಿ ನೆತ್ತಿಯಲ್ಲಿ ಭಾರೀ ಕಿರೀಟ ಧರಿಸಿ ಸೂಪರ್‌ಮ್ಯಾನ್ ಆಗುತ್ತದೆ. ತಲೆಗೆ ಟೋಪಿ ಏರಿಸಿ ಕನ್ನಡಕವಿಟ್ಟುಕೊಂಡ ವಿದೂಷಕರು, ಸುಂದರವಾಗಿ ಅಲಂಕಾರಗೊಂಡ ಹಂದಿಗಳ ಜತೆಗೆ ವೈಭವದ ಓಲಗ ನಡೆಸುತ್ತಾರೆ.

ಮರುದಿನ ಎಲ್ಲ ಅಲಂಕೃತ ಹಂದಿಗಳನ್ನೂ ಇಡಿಯಾಗಿ ಬೇಯಿಸಿ ಅಥವಾ ಹುರಿದು ಬೀದಿಯುದ್ದಕ್ಕೂ ವಿಜೃಂಭಣೆಯ ಮೆರವಣಿಗೆ ನಡೆಯುತ್ತದೆ. ವಿವಿಧ ಹಂದಿ ಖಾದ್ಯಗಳ ಮಾರಾಟ, ಭೋಜನ, ನರ್ತನ, ಪಾನಗೋಷ್ಠಿಗಳು ಇರುತ್ತವೆ. ರಾಜನಾಗಿ ರಾಣಿಯಾಗಿ ಸಿಂಗಾರಗೊಂಡ ನೂರಾರು ಹಂದಿಗಳು ಮರುದಿನ ಎಲ್ಲರ ಆಹಾರವಾಗಿ ಬಿಡುತ್ತವೆ.

■ ಪ. ರಾಮಕೃಷ್ಣ ಶಾಸ್ತ್ರಿ



